ಈಗ ಅಲ್ಲಿ ಓಡಾಡ ಜಾಸ್ತಿಯಾಗಿರುವುದರಿಂದ ರಸ್ತೆಗಳು ಕೆಟ್ಟು ಹೋಗಿವೆ. ನೀವು ಇಲ್ಲಿ ಶರಾವತಿ ಯೋಜನೆಯನ್ನು ಕೈಗೊಳ್ಳುತ್ತಿರುವುದರಿಂದ ರಸ್ತೆಯನ್ನು ಸರಿ ಮಾಡಬೇಕಾಗುತ್ತದೆ. ಅಲ್ಲಿ ರಸ್ತೆ ಸೇರಿ ಮಾಡಿಕೊಂಡು ವಾಹನಗಳ ಓಡಾಟಕ್ಕೆ ಅಡ್ಡಿಯಾಗದಂತೆ ರೀಪೇರಿ ಕೆಲಸಕ್ಕೆ ಏನಾದರೂ ಸಂಬಂಧಪಟ್ಟ ಇಲಾಖೆಗೆ ಆಥವಾ ಸರ್ಕಾರಕ್ಕೆ ಸಲಹೆ ನೀಡಿದ್ದೀರಾ ? ಆ ಮೇಲೆ ಮುಳಗಡೆಯಾಗತಕ್ಕಂಥ ಪ್ರದೇಶದಲ್ಲಿ ಗಿಡಮರಗಳು ಹೋಗುತ್ತವೆ. ಆಷ್ಟು ಜಾಗದಲ್ಲಿ ಅರಣ್ಯ ಸಹ ಹೋಗುತ್ತದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ನಾಶವಾಗತಕ್ಕಂಥ ಅರಣ್ಯವನ್ನು ಉಳಿಸುವ ಸಲುವಾಗಿ ಅಲ್ಲಿ ಖಾಲಿ ಇರುವಂತಹ ಜಾಗದಲ್ಲಿ ಏನಾದರೂ ಗಿಡಮರಗಳನ್ನು ನೆಟ್ಟು ಆಷ್ಟೇ ಪ್ರಮಾಣದ ಅರಣ್ಯವನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಬದಲಿ ಅರಣ್ಯವನ್ನು ಶಿವಮೊಗ್ಗ ಜಿಲ್ಲೆಯಲ್ಲಿ ಬೆಳೆಸುತ್ತಿರೋ ಆಥವಾ ಉತ್ತರ ಕನ್ನಡ ಜಿಲ್ಲೆಯಲ್ಲಿಯೇ ಬೆಳೆಸುತ್ತೀರೋ ? ಶಿವಮೊಗ್ಗ ಜಿಲ್ಲೆಯಲ್ಲಿ ಬೆಳೆಸಿ ಕಾಗದ ತಯಾರು ಮಾಡುವವರಿಗೆ ಕೊಡಲು ಹೊರಟಿದ್ದಾರೆ ಎನ್ನುವ ಆಪಾದನೆ ಸಹ ಇದೆ. ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡ ಬೇಕು ? ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿಯೇ ಅರಣ್ಯವನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡ ಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಲಕ್ಷ್ಮೀಸರಸಿಂಹಯ್ಯ :— ಮುಳಗಡೆಯಾಗತಕ್ಕಂಥ ಪ್ರದೇಶದಲ್ಲಿ ನಾವು ಕಳೆದುಕೊಳ್ಳು ತಕ್ಕಂಥ ಕಾಡಿಗೆ ಬದಲಾಗಿ ಆಷ್ಟೇ ವಿಸ್ತೀರ್ಣದಲ್ಲಿ ನಡು ತೋಪುಗಳನ್ನು ಮಾಡಬೇಕೆಂದು ಅದಕ್ಕೆ ಬೇಕಾದ ನಿಯಮಗಳನ್ನು ಸಹ ರೂಪಿಸಲಾಗಿದೆ. ಅರಣ್ಯ ಇಲಾಖೆಗೆ ಇದನ್ನು ವಹಿಸಿ ಮುಳಗಡೆಯಾಗ ತಕ್ಕ ಪ್ರದೇಶದಲ್ಲಿ ಬದಲಿ ಅರಣ್ಯವನ್ನು ಬೆಳೆಸುವುದಕೆ ಸರ್ಕಾರದವರು ಸುಮಾರು ೭೭ ಲಕ್ಷ ರೂಪಾಯಿ ಗಳ ಒಂದು ಅಂದಾಜು ತಯಾರು ಮಾಡಿ ಇಲಾಖೆಗೆ ಕೊಟ್ಟಿದ್ದೇವೆ. ಇದಕ್ಕೆ ಹಣವನ್ನು ನಾವು ಹಂತ ಹಂತವಾಗಿ ಕೊಡುವುದಕ್ಕೆ ಒಪ್ಪಿಕೊಂಡಿದ್ದೇವೆ. ಮುಳಗಡೆಯಾಗತಕ್ಕಂಥ ಪ್ರದೇಶದಲ್ಲಿ ನೆಡಂತೋಪು ಗಳನ್ನು ಬೆಳೆಸುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆ. ಮತ್ತು ಒಂದು ಯುನಿಟ್ ಏದ್ಯುಚ್ಛಕ್ತಿ ಬೆಲೆ ಎಷ್ಟು ಬೀಳಬಹುದೆಂದು ತಾವು ಆಗಲೇ ಕೇಳಿದಿರಿ ಅದಕ್ಕೆ ಒಂದು ಯೂನಿಟ್‌ಗೆ ೫೦ ಪೈಸೆ ಬೀಳುತ್ತದೆ. ಅಲ್ಲಿ ಅವಕಾಶ ಇಲ್ಲದಿದ್ದರೆ ನಾವು ಆಷ್ಟೇ ಪ್ರಮಾಣದ ಅರಣ್ಯವನ್ನು ಜಾಗ ಸಿಗುವಂತಹ ಕಡೆ ಬೆಳೆಸ ಬೇಕಾಗುತ್ತದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಅವಕಾಶವಿದ್ದ ಸಾಕಷ್ಟು ಜಮೀನು ಸಿಕ್ಕಿದರೆ ಖಂಡಿತ ವಾಗಿ ಅಲ್ಲಿಯೇ ಅರಣ್ಯವನ್ನು ಬೆಳೆಸುತ್ತೇವೆ. ಅಲ್ಲಿ ಸಿಗದಿದ್ದರೆ ಬೇರೆ ಕಡೆ ಅರಣ್ಯವನ್ನು ಬೆಳೆಸಬೇಕಾಗು ತ್ತದೆ ಏನೂ ಮಾಡುವುದಕ್ಕೆ ಆಗುವುದಿಲ್ಲ.

ಉತ್ತರ ಕನ್ನಡ ಜಿಲ್ಲೆಯಲ್ಲಿ ರೇಷ್ಮೆ ರೀಲಿಂಗ್ ಕೇಂದ್ರ ಸ್ಥಾಪಿಸುವುದು.

೧೩೭೭. ಶ್ರೀ ಎನ್. ಹೆಚ್. ಗೌಡ(ಕುಮಟಾ).—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮತ್ತು ರೇಷ್ಮೆ ವ್ಯವಸಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ರೇಷ್ಮೆ ಬೆಳೆಯುವ ಹಳ್ಳಿಗಳೆಷ್ಟು ?

ಆ) ಆ ಹಳ್ಳಿಗಳ ಜನರು ರೇಷ್ಮೆ ರೀಲಿಂಗ್ ಮಾಡಲು ಕಷ್ಟ ಅನುಭವಿಸುತ್ತಿರುವುದಂ ಸರ್ಕಾರ ದವರ ಗಮನಕ್ಕೆ ಬಂದಿದೆಯೇ ?

ಇ) ಶೀಘ್ರವೇ ಸದರಿ ಜಿಲ್ಲೆಯಲ್ಲಿ ಒಂದು ರೀಲಿಂಗ್ ಕೇಂದ್ರವನ್ನು ತೆಗೆಯಲು ಸೂಕ್ತ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಎ. ಲಕ್ಷ್ಮೀಸಾಗರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ರೇಷ್ಮೆ ಶಾಖೆ ಸಚಿವರು).—

ಅ) ೬೫೩ ಹಳ್ಳಿಗಳು.

ಆ) ಬಂದಿರುವುದಿಲ್ಲ.

ಇ) ರೀಲಿಂಗ್ ಕೇಂದ್ರವನ್ನು ತೆರೆಯಲಾಗಿದೆ.

ಶ್ರೀ ಎನ್. ಹೆಚ್. ಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರ ಕೊಡುತ್ತಾ ಹೇಳಿದರು. ೬೫೩ ಹಳ್ಳಿಗಳಲ್ಲಿ ರೇಷ್ಮೆ ಬೆಳೆ ಬೆಳೆಯುತ್ತಿದ್ದಾರೆಂದು. ಎರಡನೇಯ ಪ್ರಶ್ನೆಗೆ ಉತ್ತರ ಕೊಡುತ್ತಾ ಹೇಳಿದ್ದಾರೆ ಅವರಿಗೆ ಕಷ್ಟದ ಅನುಭವ ಆಗಿಲ್ಲವೆಂದು. ಅವರಿಗೆ ಕಷ್ಟದ ಅನುಭವ ಏತಕ್ಕೆ ಆಗಿಲ್ಲವೆಂದು ನಾನು ಒಂದು ಸಣ್ಣ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಅವರ ಕಷ್ಟದ ಬಗ್ಗೆ ನನಗೆ ವಿವರಣೆ ಕೊಟ್ಟರೆ ಆಗ ಅವರ ನೋವು ತಿಳಿದುಕೊಂಡು ಅವರ ನೋವನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎನ್. ಹೆಚ್. ಗೌಡ —ಮಾನ್ಯ ಅಧ್ಯಕ್ಷರೇ, ೬೫೩ ಹಳ್ಳಿಗಳಲ್ಲಿ ಸಾಮಾನ್ಯವಾಗಿ ರೇಷ್ಮೆ ಉತ್ಪಾದನೆಯನ್ನು ತಿಂಗಳಿಗೊಮ್ಮೆ ಮಾಡುತ್ತಾರೆ. ೬೫೩ ಹಳ್ಳಿಗಳಲ್ಲಿ ಉತ್ಪಾದನೆ ಮಾಡಿದ ರೇಷ್ಮೆ ಗೂಡುಗಳ ಪ್ರಮಾಣ ಎಷ್ಟು ಇದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಒಟ್ಟು ಉತ್ಪಾದನೆ ವರ್ಷಕ್ಕೆ ಸುಮಾರು ೭೬ ಮೆಟ್ರಿಕ್ ಟನ್‌ಗಳು.

ಶ್ರೀ ಎನ್. ಹೆಚ್. ಗೌಡ.—೭೬ ಮೆಟ್ರಿಕ್ ಟನ್ ರೇಷ್ಮೇ ಗೂಡು ಉತ್ಪಾದನೆ ಮಾಡಬೇಕಾದರೆ ಅವರಿಗೆ ತುಂಬಾ ಕಷ್ಟವಿದೆ. ಉತ್ತರ ಕನ್ನಡ ಜಿಲ್ಲೆಯಿಂದ ಸಾಮಾನ್ಯ ರೈತರು ರೇಷ್ಮೆ ಬೆಳೆಯನ್ನು ಒಂದು ಉದ್ಯೋಗವನ್ನಾಗಿ ಕಲ್ಪಿಸಿಕೊಂಡಿದ್ದಾರೆ. ರೈತರು ಬೆಳೆದಂತಹ ರೇಷ್ಮೆ ಗೂಡುಗಳನ್ನು ತೆಗೆದು ಕೊಂಡು ಮೈಸೂರು, ರಾಮನಗರಕ್ಕೆ ಬರಬೇಕಾಗಿದೆ. ಅವರು ಅಲ್ಲಿಂದ ಇಲ್ಲಿಗೆ ಬರಬೇಕಾದರೆ ಎಷ್ಟು ಕಷ್ಟವಾಗುತ್ತದೆಂದು ತಮಗೆ ಈಗ ಅನುಭವವಾಗಬಹುದು. ಇತ್ತೀಚಿಗೆ ನಾನು ಕೇಳಿದ್ದೇನೆ, ಸಿರಸಿಯಲ್ಲಿ ಒಂದು ಕೇಂದ್ರವನ್ನು ಮಾಡಿದ್ದಾರೆಂದು, ಅಲ್ಲಿಯೂ ಕೂಡ ಸರಿಯಾಗಿ ಕೆಲಸ ನಡೆಯುತ್ತಿಲ್ಲ. ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ, ಜನರಿಗೆ ಅನುಕೂಲವಾಗುವಂತೆ ಗೋಕರ್ಣಕ್ಕೆ ಹೊಂದಿಕೊಂಡಿರುವಂತೆ ಬದರಗೇರಿ ಎಂಬ ಹಳ್ಳಿಯಲ್ಲಿ ವಿಸ್ತೀರ್ಣವಾದ ಸ್ಥಳ ಇದೆ. ಇಲ್ಲಿ ಒಂದು ರೀಲಿಂಗ್ ಕೇಂದ್ರವನ್ನು ತೆರೆಯಲಿಕ್ಕೆ ತಾವು ಆಸ್ಪದ ಮಾಡಿಕೊಡುತ್ತೀರಾ ಎಂದು ಕೇಳುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಒಟ್ಟಿ ಉತ್ಪತ್ತಿ ಆಗತಕ್ಕಂಥ ರೇಷ್ಮೆಯ ಮೊತ್ತ ೭೬ ಮೆಟ್ರಿಕ್ ಟನ್ ಎಂದು ಹೇಳಿದ್ದೇನೆ. ಇದರಲ್ಲಿ ೬೮ ಮೆಟ್ರಿಕ್ ಟನ್‌ಗಳಷ್ಟು ರೇಷ್ಮೆ ಗೂಡುಗಳ ಬಿತ್ತನೆ ಕೆಲಸಕ್ಕೆ ಸರ್ಕಾರದವರೇ ತೆಗೆದುಕೊಳ್ಳುತ್ತಾರೆ. ಇನ್ನು ಉಳಿದ ಎಂಟು ಮೆಟ್ರಿಕ್ ಟನ್‌ಗಳಷ್ಟು ರೇಷ್ಮೆ ಗೂಡುಗಳಿಗೆ ರೀಲಿಂಗ್ ವ್ಯವಸ್ಥೆಗೆ ನೂಲು ಬಿಚ್ಚತಕ್ಕಂಥ ವ್ಯವಸ್ಥೆ ವಿಚಾರದಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪ ಮಾಡುತ್ತಿದ್ದಾರೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಈಗಾಗಲೇ ರೇಷ್ಮೆ ನೂಲು ಬಿಚ್ಚುವ ಕಾರ್ಖಾನೆಗಳು ನಾಲ್ಕು ಇವೆ. ಪೆಚ್ಚಿನ ರೀತಿಯಲ್ಲಿ ಬೇರೆ ಒಂದು ಜಾಗದಲ್ಲಿ ಮಾಡಬೇಕು ಎಂದು ಮಾನ್ಯ ಸದಸ್ಯರು ಹೇಳಿದರು. ಹೊಸದಾಗಿ ನೂಲು ಬಿಚ್ಚತಕ್ಕಂಥ ಕೇಂದ್ರಗಳನ್ನು ಸ್ಥಾಪನೆ ಮಾಡ ತಕ್ಕಂಥ ಉದ್ದೇಶ ಸಧ್ಯಕ್ಕೆ ಸರ್ಕಾರದ ಮುಂದೆ ಇಲ್ಲ.

ಶ್ರೀ ಜಿ. ರಾಜುಗೌಡ.—ಸ್ವಾಮಿ, ಹೊಸ ರೀಲಿಂಗ್ ಕೇಂದ್ರವನ್ನು ಸ್ಥಾಪನೆ ಮಾಡುವುದಿಲ್ಲ ಎಂದು ಸರ್ಕಾರದ ನೀತಿ ಇದೆಯೆಂದು ಹೇಳಿದ್ದೀರಿ. ಈ ರೀತಿ ಹೇಳಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಒಂದು ಕೇಂದ್ರವನ್ನು ತೆರೆದಿದ್ದೀರಿ. ಈ ರೀಲಿಂಗ್ ಕೇಂದ್ರ. ಸರ್ಕಾರದ್ದೋ ಅಥವಾ ಖಾಸಗಿ ಯವರದ್ದೋ, ಇಂಪ್ರೂವ್ಡ್ ಚರಕವೋ ಅಥವಾ ಕಾಟೇಜ್ ಬೇಸಿನ್, ಮತ್ತೊಂದರಲ್ಲಿ ಎಷ್ಟು ಉತ್ಪಾದನೆ ಮಾಡುತ್ತಿದ್ದೀರಿ ? ಈ ರೇಷ್ಮೆ ಉತ್ಪಾದನೆ ಮಾಡಲಿಕ್ಕೆ ಒಂದು ಕೆ.ಜಿ.ಗೆ ಎಷ್ಟು ರೂಪಾಯಿ ಗಳು ಖರ್ಚಾಗುತ್ತದೆ ?

ಶ್ರೀ ಎ. ಲಕ್ಷ್ಮೀಸಾಗರ್.—ಇದಕ್ಕೆ ಪ್ರತ್ಯೇಕವಾದ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳ ಬೇಕಾಗುತ್ತದೆ.